ಗೊತ್ತಿರದ ಗಂಡಸು ಗಂಡಸೇ ಅಲ್ಲ – ಅಂತೆಲ್ಲ ಅಂದುಬಿಟ್ಟಳಂತೆ. ಮೈ ಚೆನ್ನಾಗಿ ಇಟ್ಟುಕೋಬೇಕು. ಜಿಮ್ಮ್ ಹೊಕ್ಕು ಹೊಟ್ಟೆ ಕರಗಿಸು... ಅಂತೆಲ್ಲ ಉಪದೇಶ ಮಾಡಿದಳಂತೆ...'

'.....'

'ಇದೇನೋ ಸರಿ... ಆದರೆ, ನನ್ನ ಅಪ್ಪ ನಿನ್ನ ಮದುವೆಯ ಟೈಮಿನಲ್ಲಿ ನಿನಗೆ ಅವಮಾನ ಮಾಡಿದ್ದರಂತಲ್ಲ–ಅದನ್ನ ಸಹ ಎತ್ತಾಡಿದಳಂತೆ... ಇದು ಸರೀನಾ, ಕನಕಮ್ಮಾ? ನನ್ನಪ್ಪ ಮಾಡಿದ ತಪ್ಪಿಗೆ ನನ್ನ ಮಗನ ಮೇಲೆ ಸೇಡು ತೀರಿಸಿಕೊಳ್ಳೋದು ಸರೀನಾ?'

ಏನನ್ನುವುದಂತ ತಿಳಿಯಲಿಲ್ಲ. ಚಿನ್ನುವನ್ನು ವಹಿಸಿಕೊಂಡು ಮಾತನಾಡುವುದಂತಲೂ ತಿಳಿಯಲಿಲ್ಲ. ತಪ್ಪೆಂಬುದು ತಪ್ಪೇ ತಾನೇ?

'ಸರಿ... ನಾನು ಏರ್ಪೋರ್ಟಿಗೆ ಹೊರಟಿದೀನಿ... ಬಂದ ಮೇಲೆ ಏನೂಂತ ತಿಳಕೊಂಡು ಫೋನು ಮಾಡುತೀನಿ...'

'ನೀನೇನಮ್ಮ ವಿಚಾರಿಸೋದು? ನನ್ನ ಮಗನೇ ಫೋನು ಮಾಡಿ ಎಲ್ಲ ವಿಷಯ ಹೇಳಿದ... ಮಧ್ಯಾಹ್ನದವರೆಗೂ ಸುಮ್ಮನಿದ್ದು, ಏರ್ಪೋರ್ಟ್ ತಲುಪಿದ ಮೇಲೆ, ಇಷ್ಟೆಲ್ಲ ಮಾತಾಡಿದಳಂತೆ... ಸುಮ್ಮನಿರಲ್ಲ ನಾನು... ಒಳ್ಳೇದಾಗಲ್ಲ...'

ಗುರುಚರಿತ ಕೂಗಾಡುತ್ತಲೇ ಇದ್ದನೇನೋ. ಇದ್ದಕ್ಕಿದ್ದಂತೆ ಸಿಗ್ನಲು ತಪ್ಪಿ ಫೋನು ಕಡಿಯಿತು. ವಾಪಸು ಮಾಡಲು ಹೊಂಚುವಾಗ, ನೀಲಿ, 'ಬೇಡ... ಸುಮ್ಮನಿದ್ದು ಬಿಡು... ಆಗಿರೋದೆಲ್ಲ ಒಳ್ಳೇದಕ್ಕೆ...' ಎಂದು, ಎಡಗೈಯಿಂದ ನನ್ನ ಬೆನ್ನು ತಟ್ಟಿದರು.

'ಅಲ್ಲರೀ... ಏನ್ರೀ ಇದೆಲ್ಲ? ಇವಳು ಅಲ್ಲೀವರೆಗೂ ಹೋಗಿ ಹೀಗೆಲ್ಲ ಮಾಡೋದಾ?'

'ಸರಿಯಾಗೇ ಮಾಡಿದ್ದಾಳೆ...' ನೀಲಿ ನಗುತ್ತ ಹೇಳಿದರು. 'ಎಲ್ಲಿ... ನಿನ್ನ ಮೊಬೈಲಿಗೆ ಈಗಷ್ಟೇ ಒಂದು ಫೋಟೊ ಬಂದಿರುತ್ತೆ –ನೋಡು... ವಾಟ್ಸ್ಯಾಪ್ ಮಾಡಿದ್ದೀನಿ?'

'ಯಾವಾಗರೀ ಮಾಡಿದಿರಿ? ನಾನು ನಿಮ್ಮ ಪಕ್ಕದಲ್ಲೇ ಇದ್ದೀನಲ್ಲ?'

'ಮನೆಯಿಂದ ಹೊರಡೋಕೆ ಮುಂಚೆ ಮಾಡಿದೆ, ನೋಡಮ್ಮ... ಹೇಳೋಣ ಅನ್ನೋ ಅಷ್ಟರಲ್ಲಿ ಈ ಮನುಷ್ಯನ ಫೋನು ಬಂತಲ್ಲ?'

ಫೋನನ್ನು ತೆರೆದು ನೋಡಿದೆ. ಚಿನ್ನು ಕಳಿಸಿದ್ದ ಫೋಟೋವನ್ನು ನೀಲಿ ಫಾರ್ವರ್ಡ್ ಮಾಡಿದ್ದರು. ಸರ್ವಾಂಗಸುಂದರನೆನಿಸುವ ಹುಡುಗನೊಡನೆ ಚಿನ್ನು ಕೈಕೈ ಹಿಡಿದು ನಿಂತಿದ್ದಳು! ಆಶ್ಚರ್ಯವೂ ಸಂತೋಷವೂ ಒಟ್ಟೊಟ್ಟಿಗೆ ಘಲಿಸುವಾಗ –ಸಾವೇ ಎರಗಿಬಂದಂತೆ ವಿಭ್ರಮಿಸಿಬಿಟ್ಟೆ!

## ನಾಗರಾಜ ವಸ್ತಾರೆ

ಕವಿ, ಕತೆಗಾರ, ಪ್ರಬಂಧಕಾರ, ಆರ್ಕಿಟೆಕ್ಟ್ ನಾಗರಾಜ ವಸ್ತಾರೆ 'ಹಕೂನ ಮಟಾಟ', 'ನಿರವಯವ' ಎಂಬ ಕಥಾಸಂಕಲನಗಳನ್ನು, 'ಮಡಿಲು' ಎಂಬ ನೀಳ್ಗತೆಯನ್ನು ಪ್ರಕಟಿಸಿದ್ದಾರೆ. 'ಹಳೆಮನೆ ಕತೆ', 'ಬಯಲು ಆಲಯ' ಮತ್ತು 'ಪಟ್ಟಣ ಪುರಾಣ' ಅವರ ಅಂಕಣ ಬರಹಗಳ ಪುಸ್ತಕಗಳಾದರೆ, 'ವಸ್ತಾರೆ ಪದ್ಯಗಳು', 'ವಸ್ತಾರೆ ಇನ್ನೂ 75' ಅವರ ಕವಿತೆಗಳ ಸಂಗ್ರಹಗಳಾಗಿವೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.